ಕರ್ನಾಟಕ ವಿಧಾನ ಸಭೆ, ಸಂಶೋಧನಾ ಹಾಗೂ ಉಲ್ಲೇಖನಾ ಶಾಖೆ
KARNATAKA LEGISLATIVE ASSEMBLY RESEARCH AND REFERENCE BRANCH
ಪತ್ರಿಕಾ ತುಣುಕುಗಳು
PAPER CLIPPINGS
ದಿನಾಂಕ : DATE : 13/07/2019
ಇಲಾಖೆ / ವಿಷಯ: DEPARTMENT / SUBJECT:
ಪತ್ರಿಕೆಯ ಹೆಸರು : NAME OF THE NEWS PAPER : ಕನ್ನಡಪ್ರಭ

**ವಿಪ್ ಅಸ್ತ್ರ** ವಿಶ್ವಾಸಮತ ಸಾಬೀತಿನ ದಿನ ಕಡ್ಡಾಯವಾಗಿ ಸದನಕ್ಕೆ ಬಂದು ಪಕ್ಷದ ಪರ ಮತ ಹಾಕುವಂತೆ ಪ್ರತ್ಯೇಕ ವಿಪ್ ಜಾರಿ ಸಾಧ್ಯತೆ

# ಕಾಂಗ್ರೆಸ್, ಜೆಡಿಎಸ್ ಶಾಸಕರಿಗೆ ಮತ್ತೊಮ್ಮೆ ವಿಪ್?

13/7/19

• **ಕನ್ನಡಪ್ರಭ ವಾರ್ತೆ** ಬೆಂಗಳೂರು

ಮುಖ್ಯಮಂತ್ರಿ ಎಚ್.ಡಿ. ಕುಮಾರಸ್ವಾಮಿ ಅವರು ವಿಶ್ವಾಸಮತ ಯಾಚನೆಗೆ ನಿರ್ಧರಿಸಿರುವ ಹಿನ್ನಲೆಯಲ್ಲಿ ವಿಶ್ವಾಸಮತ ಯಾಚನೆಯ ದಿನ ಎಲ್ಲಾ ಶಾಸಕರು ಕಡ್ಡಾಯವಾಗಿ ಹಾಜರಾಗಿ ಸರ್ಕಾರದ ಪರವಾಗಿ ಮತ ಚಲಾಯಿಸುವಂತೆ ಕಾಂಗ್ರೆಸ್, ಜೆಡಿಎಸ್ ಶಾಸಕರಿಗೆ ಮತ್ತೊಮ್ಮೆ ವಿಪ್ ಜಾರಿ ಮಾಡುವ ಸಾಧ್ಯತೆ ಇದೆ.

ಆದರೆ, ಈ ವಿಪ್ ರಾಜೀನಾಮೆ ನೀಡಿರುವ ಶಾಸಕರಿಗೆ ಅನ್ವಯವಾಗುವ ಬಗ್ಗೆ ಹಾಗೂ ವಿಪ್ ಉಲ್ಲಂಘನೆ ಮಾಡಿದ ಶಾಸಕರನ್ನು ಅನರ್ಹ ಮಾಡುವ ಬಗ್ಗೆ ಜಿಜ್ಞಾಸೆ ಮುಂದುವರೆದಿದೆ. ಈಗಾಗಲೇ ಶಾಸಕರಿಗೆ ಶುಕ್ರವಾರದಿಂದ ಆರಂಭವಾಗಲಿರುವ ಅಧಿವೇಶನಕ್ಕೆ ಕಡ್ಡಾಯವಾಗಿ ಹಾಜರಾಗಿ, ವಿತ್ತೀಯ ವಿಧೇಯಕ ಮಂಡನೆಯಾದಾಗ ಸರ್ಕಾರದ ಪರ ಮತ ಚಲಾಯಿಸುವಂತೆ ಕಾಂಗ್ರೆಸ್ ಹಾಗೂ ಜೆಡಿಎಸ್ ವಿಪ್ ಜಾರಿ ಮಾಡಿದ್ದವು. ತಪ್ಪಿದರೆ ಸಂವಿಧಾನದ ಶೆಡ್ಯೂಲ್-10ರ ಪಕ್ಷಾಂತರ ನಿಷೇಧ ಕಾಯ್ದೆಯಡಿ ಕ್ರಮ ಕೈಗೊಳ್ಳಲಾಗುವುದು ಎಂದು ಎಚ್ಚರಿಕೆಯನ್ನೂ ನೀಡಲಾಗಿತ್ತು. ಹೀಗಿದ್ದರೂ ರಾಜೀನಾಮೆ ನೀಡಿರುವ ಅತೃಪ್ತ ಶಾಸಕರು ಸದನಕ್ಕೆ ಗೈರಾಗುವ ಮೂಲಕ ವಿಪ್ ಉಲ್ಲಂಘನೆ ಮಾಡಿದ್ದಾರೆ.

ಇದೀಗ ವಿಶ್ವಾಸ ಮತ ಯಾಚನೆ ವೇಳೆ ಅಧಿವೇಶನಕ್ಕೆ ಹಾಜರಾಗಬೇಕು ಎಂದು ಮತ್ತೊಂದು ವಿಪ್ ಜಾರಿ ಮಾಡಲು ಜೆಡಿಎಸ್ ಹಾಗೂ ಕಾಂಗ್ರೆಸ್ ಸಿದ್ಧತೆ ನಡೆಸಿವೆ. ಈ ವೇಳೆಯೂ ಹಾಜರಾಗದಿದ್ದರೆ ಸತತ ಎರಡು ವಿಪ್ ಉಲ್ಲಂಘನೆ ಆರೋಪದ ಮೇಲೆ ಅನರ್ಹತೆಗೆ ದೂರು ನೀಡಲು ಮುಂದಾಗಿವೆ. ಆದರೆ, ಈ ಬೆಳವಣಿಗೆಗಳ ನಡುವೆ ರಾಜೀನಾಮೆ ನೀಡಿರುವ ಅತೃಪ್ತ ಶಾಸಕರಿಗೆ ವಿಪ್ ಅನ್ವಯ ಆಗುತ್ತದೆಯೋ ಅಥವಾ ಇಲ್ಲವೋ ಎಂಬುದರ ಬಗ್ಗೆ ಜಿಜ್ಞಾಸೆ ಮೂಡಿದ್ದು, ಕಾನೂನು ತಜ್ಞರಿಂದಲೇ ವಿಭಿನ್ನ ಅಭಿಪ್ರಾಯಗಳು ವ್ಯಕ್ತವಾಗಿವೆ.

## ರಾಜೀನಾಮೆ ನಂತರ ವಿಪ್ ಕೊಟ್ಟರೆ ಅನ್ವಯವಾಗುವುದಿಲ್ಲ

ಕೆಲ ತಜ್ಞರ ಪ್ರಕಾರ, ಪಕ್ಷವೊಂದು ವಿಪ್ ಜಾರಿ ಮಾಡಿದ ನಂತರ ಶಾಸಕರು ತಮ್ಮ ಸ್ಥಾನಕ್ಕೆ ರಾಜೀನಾಮೆ ನೀಡಿದ್ದರೆ ಆಗ ವಿಪ್ ಅನ್ವಯವಾಗುತ್ತದೆ. ಆದರೆ, ಈ ಪ್ರಕರಣದಲ್ಲಿ ರಾಜೀನಾಮೆ ನೀಡಿದ ನಂತರ ವಿಪ್ ಜಾರಿಯಾಗಿದೆ. ಹೀಗಾಗಿ ಅತೃಪ್ತ ಶಾಸಕರಿಗೆ ವಿಪ್ ಅನ್ವಯವಾಗುವುದಿಲ್ಲ. ಉಳಿದಂತೆ ಅನರ್ಹತೆ ಕುರಿತು, ಪಕ್ಷಾಂತರ ನಿಷೇಧ ಕಾನೂನು ಅನ್ವಯ ಶಾಸಕರು ಅನರ್ಹರಾದರೆ ಅವರು ಮರು ಚುನಾವಣೆಯಲ್ಲಿ ಗೆಲ್ಲುವವರೆಗೆ ಮಾತ್ರ ಸಂವಿಧಾನಿಕ ಹುದ್ದೆ ಅಥವಾ ಸಚಿವ ಸ್ಥಾನದಿಂದ ವಂಚಿತರಾಗಬೇಕಾಗುತ್ತದೆ. ಯಾವುದೇ ಶಾಸಕ ಅನರ್ಹಗೊಂಡಾಗ ಆತ ಆಯ್ಕೆಯಾಗಿದ್ದ ವಿಧಾನಸಭೆಯ ಅವಧಿಗೆ ಮಾತ್ರ ಅನರ್ಹಗೊಳ್ಳುತ್ತಾನೆ. ಈ ವಿಧಾನಸಭೆಯ ಅವಧಿಯೊಳಗೆ ಮರು ಚುನಾವಣೆ ನಡೆದು ಅದರಲ್ಲಿ ಆತ ಸ್ಪರ್ಧಿಸಿ ಆಯ್ಕೆಯಾದರೆ ಆಗ ಅನರ್ಹತೆ ರದ್ದಾಗುತ್ತದೆ ಎಂದು ಹೇಳುತ್ತಾರೆ.

## ವಿಪ್ ಅನ್ವಯವಾಗುತ್ತದೆ, ಅನರ್ಹ ಮಾಡಬಹುದು

ಇನ್ನು ಕೆಲ ಕಾನೂನು ತಜ್ಞರ ಪ್ರಕಾರ, ಶಾಸಕರು ರಾಜೀನಾಮೆ ನೀಡಿದ್ದರೂ, ಅಂಗೀಕಾರವಾಗದ ಕಾರಣ ಶಾಸಕರಾಗಿಯೇ ಇರುತ್ತಾರೆ. ಹೀಗಾಗಿ ವಿಪ್ ಅನ್ವಯವಾಗಲಿದೆ. ಇನ್ನು ವಿಪ್ ಉಲ್ಲಂಘಿಸಿದ ಆರೋಪದ ಮೇಲೆ ಅನರ್ಹಗೊಳಿಸಲು ದೂರು ನೀಡಿದರೆ ಅದೂ ಅನ್ವಯವಾಗಲಿದೆ. ಪಕ್ಷಾಂತರ ಕಾನೂನು ಸಂವಿಧಾನ ಶೆಡ್ಯೂಲ್ 10ರ ಸೆಕ್ಷನ್ 2(1) ಪ್ರಕಾರ 'ಸದನದ ಸದಸ್ಯರಾಗಲು ಅನರ್ಹ' ಎಂದು ಹೇಳಲಾಗುತ್ತದೆ. ಸಂವಿಧಾನದ ಪರಿಚ್ಛೇದ 83(2) ಸದನದ ಅವಧಿ ಎಂದರೆ, ಐದು ವರ್ಷ (ವಿಸರ್ಜನೆ ಯಾಗದೆ ಹೋದರೆ) ಮುಂದು ವರಿಯುತ್ತದೆ. ಅಂದರೆ ಸದನದ ಸದಸ್ಯನಾಗಲು ಅನರ್ಹಗೊಳಿಸುವುದೆಂದರೆ ಸದನದ ಅವಧಿಯವರೆಗೆ (5 ವರ್ಷ) ಅಥವಾ ಸದನ ವಿಸರ್ಜನೆಯಾಗುವರೆಗೆ ಸದಸ್ಯನಾಗಲು ಅನರ್ಹತೆ ಮಾಡುವುದು. ಹೀಗಾಗಿ, ಅನರ್ಹಗೊಂಡ ಶಾಸಕನು ಸದನದ ಅವಧಿ ಮುಗಿಯುವರೆಗೆ ಅಥವಾ ಸದನ ವಿಸರ್ಜನೆ ಯಾಗುವವರೆಗೆ ಉಪ ಚುನಾವಣೆ ಸೇರಿ ಯಾವುದೇ ಚುನಾವಣೆಗೂ ಸ್ಪರ್ಧೆ ಮಾಡಲು ಸಾಧ್ಯವಿಲ್ಲ.